ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಎಲ್ಲಾ 149 ತಾಲ್ಲೂಕು ಆಸ್ಪತ್ರೆಗಳನ್ನು 100 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸಲಾಗಿದೆ

ಆ) ಉದ್ಭವಿಸುವುದಿಲ್ಲ

ಇ) ಸರ್ಕಾರವು 500 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ನೇಮಕ ಮಾಡಲು ಅನುಮತಿ ನೀಡಿದ್ದು, ಇದರಲ್ಲಿ ಈಗಾಗಲೇ ಮೊದಲ ಹಂತವಾಗಿ 250 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆದಿದೆ ಇದಲ್ಲದೇ ಖಾಲಿಯಿರುವ ಹುದ್ದೆಗಳನ್ನು ಒಪ್ಪಂದದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅನುಮತಿ ನೀಡಲಾಗಿದೆ

ಈ) ಮೊದಲ ಹಂತದಲ್ಲಿ 250 ವೈದ್ಯರನ್ನು ನೇಮಕಾತಿ ಮಾಡಿಕೊಳ್ಳಲು ಮೌಖಿಕ ಸಂದರ್ಶನ ನಡೆಸಲಾಗಿದ್ದು, ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಗೊಳಿಸಲಾಗುವುದು

628 (953) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ಯಾವ ಯಾವ ರೋಗಗಳಿಗೆ ಸೇವಾ ಸೌಲಭ್ಯವನ್ನು ಕಲ್ಪಿಸಲಾಗಿದೆ (ಒಂದು ವರ್ಷದ ಅಂಕಿ ಅಂಶ ನೀಡುವುದು)?

ಆ) ಈ ಆಸ್ಪತ್ರೆಯಲ್ಲಿ ಇನ್ನೂ ಯಾವ ಯಾವ ಖಾಯಿಲೆಗಳಿಗೆ ಸೇವಾ ಸೌಲಭ್ಯ ಲಭ್ಯವಿರುವುವು (ವಿವರ ಒದಗಿಸುವುದು)?

ಇ) ಲಭ್ಯವಿಲ್ಲದ ಸೇವಾ ಸೌಲಭ್ಯಗಳನ್ನು ಕಲ್ಪಿಸುವ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಡಾ ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು)

ಅ)

ಸೇವಾ ಸೌಲಭ್ಯ ವಿಭಾಗ	ಪ್ರಸ್ತುತ ಸಾಲಿನಲ್ಲಿ ಚಿಕಿತ್ಸೆ ಪಡೆದ ರೋಗಿಗಳ ಸಂಖ್ಯೆ
1) ಶಸ್ತ್ರ ಚಿಕಿತ್ಸೆ (ಸಾಮಾನ್ಯ)	8321
2) ಆರ್ಥೋಪೆಡಿಕ್ಸ್	2678

3) ಅರ್ಬುದ ರೋಗ	5087 ಕೋಬಾಲ್ಟ್ ಚಿಕಿತ್ಸೆ
4) ಸಿಟಿ ಸ್ಕ್ಯಾನ್	928
5) ಮೆಡಿಸಿನ್	12155
6) ಐ ಸಿ ಸಿ ಯು ವೆಂಟಿಲೇಷನ್	126
7) ಸುಟ್ಟ ಗಾಯ	518
8) ಡಯಾಲಿಸಿಸ್	728
9) ನರರೋಗ	30
10) ನೇತ್ರ ಶಾಸ್ತ್ರ	2533
11) ಕಿವಿ, ಮೂಗು, ಗಂಟಲು	1480
12) ಮಾನಸಿಕ ರೋಗ	46
13) ಚರ್ಮರೋಗ	217

ಆ) ಬೇರೆ ಯಾವ ಸೌಲಭ್ಯ ಲಭ್ಯವಿರುವುದಿಲ್ಲ

ಇ) ಮುಂದೆ ಪರಿಶೀಲಿಸಲಾಗುವುದು

629 (954) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಯಾವ ಯಾವ ಔಷಧಿ ಹಾಗೂ ಮಾತ್ರೆಗಳನ್ನು ಒದಗಿಸಲಾಗುತ್ತದೆ (ವಿವರಗಳ ಪಟ್ಟಿ ನೀಡುವುದು)?

ಆ) ಇದಕ್ಕಾಗಿ ಸರ್ಕಾರಕ್ಕೆ ವಾರ್ಷಿಕ ಎಷ್ಟು ಹಣ ಖರ್ಚಾಗುತ್ತಿದೆ?

ಇ) ಕಳೆದ ಮೂರು ವರ್ಷಗಳಲ್ಲಿ ಉಚಿತವಾಗಿ ರೋಗಿಗಳಿಗೆ ಒದಗಿಸಿರುವ ಔಷಧಿ ಹಾಗೂ ಮಾತ್ರೆಗಳ ಪ್ರಮಾಣ ಎಷ್ಟು (ರೋಗಿಗಳಿಗೆ ವಿತರಿಸಿರುವ ಔಷಧಿಯ ಮಾಹಿತಿಯನ್ನು ಆಸ್ಪತ್ರೆವಾರು ವಿವರ ಒದಗಿಸುವುದು?

ಈ) ಸರ್ಕಾರ ಉಚಿತವಾಗಿ ಒದಗಿಸುತ್ತಿರುವ ಔಷಧಿ ಹಾಗೂ ಮಾತ್ರೆಗಳ ದುರುಪಯೋಗದ ಬಗ್ಗೆ ಮೂರು ವರ್ಷಗಳಲ್ಲಿ ದೂರುಗಳೇನಾದರೂ ಬಂದಿದೆಯೇ?